**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ 25, ಪ್ರಾ.ಸಾಃ 12**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಎಸ್. ಆರ್. |
| ತಂದೆಯ ಹೆಸರು | ರಾಮಚಂದ್ರಮೂರ್ತಿ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಪೋಲೀಸ್ ತರಬೇತಿ ಶಾಲೆ, ಕಡೂರು |
| ವಾಸ್ತವ್ಯ | ಕಡೂರು |

**ಸಾಕ್ಷಿಯನ್ನು ದಿನಾಂಕಃ 11-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಕ್ಟೋಬರ್-2020 ರಿಂದ ಜನವರಿ-2023 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **03-10-2020** ರಂದು ಚಾಸಾ-24 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 10-10-2020 ರಂದು ಕಳ್ಳತನ ಆಗಿದ್ದ ಮನೆಯ ಉತಾರನ್ನು ಪೂರೈಸುವಂತೆ ಪಂಚಾಯತಿಗೆ ಪತ್ರ ಬರೆದಿದ್ದು ಅದರಂತೆ ದಿನಾಂಕ 06-11-2020 ರಂದು ಹಳದೀಪುರ ಪಂಚಾಯತಿಯವರು ಮನೆಯ ಉತಾರನ್ನು ಪೂರೈಸಿರುತ್ತಾರೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಪಂಚಾಯತಿಯವರು ನೀಡಿದ ಮಾಹಿತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಉತಾರನ್ನು ನೋಡುತ್ತಿದ್ದು ನಿಪಿ-10 ಎಂದು ಗುರುತಿಸಲಾಗಿದೆ.

ದಿನಾಂಕ 11-10-2020 ರಂದು ಘಟನಾ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಚಾಸಾ-11 ರವರಿಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ದಿನಾಂಕ 09-11-2020 ರಂದು ಸದರಿಯವರು ಒಂದು ಪತ್ರದ ಮೂಲಕ ನಕಾಶೆಯನ್ನು ತಯಾರಿಸಿಕೊಟ್ಟಿರುತ್ತಾರೆ. ಎಇಇ ರವರ ಪತ್ರವನ್ನು ನೋಡುತ್ತಿದ್ದು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ-9 ಎಂದು ಗುರುತಿಸಲಾಗಿದೆ.

ದಿನಾಂಕ 20-10-2020 ರಂದು ಮಣಪುರಂ ಫೈನಾನ್ಸ ವ್ಯವಸ್ಥಾಪಕರಿಗೆ ಆರೋಪಿತರು ಒಡವೆ ಇಟ್ಟಿರುವ ಬಗ್ಗೆ ಮಾಹಿತಿ ನೀಡುವಂತೆ ಒಂದು ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸದರಿಯವರು

ದಿನಾಂಕ 24-10-2020 ರಂದು ಒಂದು ಪತ್ರದ ಮೂಲಕ 2 ಆಧಾರ ಕಾರ್ಡ್, 4 ಸಾಲದ ಅರ್ಜಿಗಳು, ಲೆಡ್ಜರ್ ಬುಕ್‌ನ 2 ಪ್ರತಿಗಳನ್ನು ಪೂರೈಸಿರುತ್ತಾರೆ. ಮಣಪುರಂ ಫೈನಾನ್ಸನ ಲೆಟರನ್ನು ನೋಡುತ್ತಿದ್ದು ನಿಪಿ-19 ಎಂದು, 2 ಆಧಾರ ಕಾರ್ಡಗಳ ಪ್ರತಿಗಳನ್ನು ನಿಪಿ-20 ಮತ್ತು 21 ಎಂದು, 4 ಸಾಲದ ಅರ್ಜಿಗಳನ್ನು ನಿಪಿ-22 ರಿಂದ 25 ಎಂದು, ಲೆಡ್ಜರ್ ಬುಕ್‌ನ 2 ಪ್ರತಿಗಳನ್ನು ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು.

ನಂತರ ತನಿಖೆ ಪೂರೈಸಿ ದಿನಾಂಕ 09-11-2020 ರಂದು ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ</u>**

ಪಂಚಾಯತಿಯವರು ಪೂರೈಸಿದ ನಿಪಿ-10 ಚಾಸಾ-1 ರವರ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಅದು ಪಿರ್ಯಾದಿಯ ಅಜ್ಜನ ಹೆಸರಿನಲ್ಲಿದೆ. ಪಿರ್ಯಾದಿಯ ತಂದೆಯ ಹೇಳಿಕೆಯನ್ನು ಪಡೆಯಲಾಗಿ ಸದರಿ ಹೇಳಿಕೆಯಲ್ಲಿ ಆತ ತನ್ನ ತಂದೆಯ ಹೆಸರು ಗೊಯ್ದು ಗೋಳಿಬೀರ ಗೌಡ ಅಂತ ತಿಳಿಸಿರುತ್ತಾರೆ. ಆದ್ದರಿಂದ ಅದು ಪಿರ್ಯಾದಿಯ ಅಜ್ಜನ ಹೆಸರಾಗಿರುತ್ತದೆ. ಪಿರ್ಯಾದಿಗೂ ಸದರಿ ಮನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಇಇರವರು ನೀಡಿರುವ ನಕಾಶೆಗೂ, ಕಚ್ಚಾ ನಕಾಶೆಗೂ ತಾಳೆ ಆಗುವುದಿಲ್ಲ ಎಂದರೆ ಸರಿ. ಎಇಇರವರು ನಕಾಶೆ ತಯಾರಿಸುವ ಕಾಲಕ್ಕೆ ನಾವು ಹಾಜರಿರಲಿಲ್ಲ. ಆದರೆ ಸಿಬ್ಬಂದಿಯನ್ನು ಕಳುಹಿಸಿದ್ದೆವು.

ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮಣಪುರಂ ಫೈನಾನ್ಸನವರು ಹಾಜರುಪಡಿಸಿದ ದಾಖಲೆಗಳು ಆರೋಪಿಗಳಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲಾಗಿದ್ದ 10 ರಿಂದ 12 ಪ್ರಕರಣಗಳನ್ನು ಮುಕ್ತಾಯ ಮಾಡಬೇಕು ಎಂದು ಮೇಲಾಧಿಕಾರಿಗಳು ಸೂಚಿಸಿದ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**